RT9

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ:ಸಿಆಸುಇ:101:ಆರ್‌ಟಿಐ:2009

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು. ದಿನಾಂಕ:06.07.2009.

## ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರಡಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಂಪೂರ್ಣ ವಿಳಾಸ ತಿಳಿಸುವ ಕುರಿತು.

ಉಲ್ಲೇಖ: ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ: KIC 396 PTN 2009, ದಿ: 20.05.2009.

------

ಕರ್ನಾಟಕ ಮಾಹಿತಿ ಆಯೋಗವು ಅರ್ಜಿದಾರರಾದ ಶ್ರೀ ಸಾಯಿ ಚಪಲಗಾವಂಕರ್ ಇವರ ದೂರು ಪ್ರಕರಣದ ವಿಚಾರಣೆಯ ಆದೇಶದಲ್ಲಿ ಅರ್ಜಿದಾರರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡುವಾಗ ಸಂಪೂರ್ಣ ವಿಳಾಸವನ್ನು ಒದಗಿಸುವ ಬಗ್ಗೆ ನೀಡಿರುವ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ (ದಿ: 20.05.2009 ರ ಆದೇಶ ಸಂಖ್ಯೆ:KIC:396:PTN:2009).

ಆಯೋಗವು ಆದೇಶದ ಕ್ರಮ ಸಂಖ್ಯೆ: 9 ರಲ್ಲಿ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

**``Commission further directs that in all communications with an RTI applicant, the name of the PIO, his phone number and address as also the name and address and telephone number of the First Appellate Authority must be mentioned``.**

ಆಯೋಗದ ನಿರ್ದೇಶನದಂತೆ, ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿಯ ಮತ್ತು ಮೊದಲ ಅಪೀಲು ಪ್ರಾಧಿಕಾರದ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆಯೊಂದಿಗೆ ನಮೂದಿಸಿ ಕಳುಹಿಸುವಂತೆ ತಮ್ಮ ಆಡಳಿತದ ಅಧೀನಕ್ಕೊಳಪಡುವ ಎಲ್ಲಾ ಅಧಿಕಾರಿಗಳು, ಸಾರ್ವಜನಿಕ ಪ್ರಾಧಿಕಾರಿಗಳು, ಇಲಾಖಾ ಮುಖ್ಯಸ್ಥರು, ನಿಗಮ/ಮಂಡಳಿ, ಸರ್ಕಾರಿ ಸಾಮ್ಯ ಸಂಘ/ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿದೆ.

(ಬಿ. ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ಜನಸ್ಪಂದನ ಕೋಶ- ಮಾಹಿತಿ ಹಕ್ಕು)

ಗೆ,
1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
2. ಹೆಚ್ಚಿನ ಪ್ರತಿ

K. JAIRAJ
Principal Secretary to Governi
Energy Department

ಪ್ರತಿ:
1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಅಪರ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ) ಇವರ ಆಪ್ತ ಶಾಖೆಗೆ.
4) ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.